


# ನಿಟ್ಟುಸಿರ ಜಾತ್ರೆ

ಈ ಪ್ರೀತಿಯ ದಡ
ತಲುಪಿದ ನಾನು
ಇನ್ನೂ ಹುಟ್ಟು ಸಿಗದೆ
ದೋಣಿ ಏರದೆ
ಆ ದಡದಲ್ಲೇ ನಿಂತಿರುವವರ ಕುರಿತು
ಏನೆಂದು ಹಾಡಲಿ

ಮುಳುಗುವ ಈ ಹಾದಿಯಲಿ ಸಾಗಿ
ದಡ ತಲುಪಿದ ಸಂಭ್ರಮವದು
ಯಾರದೆಂದು ಬೀಗಲಿ

ಇನ್ನೂ ಆ ಬದಿಯಲೇ ನಿಂತು
ದಡದತ್ತ ದಿಟ್ಟಿಸುವ ಕಂಗಳಲಿ
ಮಿನುಗುವ ಕನಸುಗಳ
ನನ್ನತ್ತ ಕರೆಯಲೇ

ಇವರು
ಈ ನಿಟ್ಟುಸಿರಿನ ದಡ ತಲುಪಿದರೆ
ತಮ್ಮ ಅಸ್ತಿತ್ವವೇ ಅಲುಗಾಡುವುದೆಂದು
ರೋದಿಸುವವರ
ಕ್ರೌರ್ಯದ ತೂತುಗಳಿಗೆ
ತೇಪೆ ಹಾಕುವ ಕೈ
ನನ್ನವೂ ಆದ ದಿನ
ನಾನಿರುವ ಈ ದಡಕೆ ಬಂದು ಸೇರುವ
ಪ್ರೀತಿಯ ಊರಿನ ರಾಯಭಾರಿಗಳೊಂದಿಗೆ
ಆಚರಿಸುವ ಸಂಭ್ರಮಕೆ
ಏನೆಂದು ಹೆಸರಿಡಲಿ?

ಕ್ರೌರ್ಯದ ನಾಡಿನ ನಿಟ್ಟುಸಿರ ಜಾತ್ರೆ
ಎನ್ನಲೇ?

● **ಎಚ್.ಕೆ. ಶರತ್**
ಕಲೆ: ಡಿ.ಕೆ. ರಮೇಶ್